ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.286/2020

| | | | |
|---|---|---|---|
| ಹೆಸರು | : | ಯಶೋದಮ್ಮ | ಸಿ .ಡಬ್ಲ್ಯೂ :2 |
| ಗಂಡನ ಹೆಸರು | : | ಲೇಟ್ ನಿಂಗಪ್ಪ | ಪಿ .ಡಬ್ಲ್ಯೂ :2 |
| ವಯಸ್ಸು | : | 70 ವರ್ಷ | |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಕಲ್ಲೂರು ಕ್ರಾಸ್ | |

ಸಾಕ್ಷಿಯನ್ನು ದಿಃ 24-03-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -1 ನನ್ನ ಮಗ . ಚಾಸಾ -3 ಮತ್ತು 4 ಪರಿಚಿತರು

ಸುಮಾರು 5 ವರ್ಷಗಳ ಹಿಂದೆ ಮೇ ತಿಂಗಳಿನಲ್ಲಿ ನಮ್ಮ ವಾಸದ ಮನೆಯ ಹಿಂಭಾಗಕ್ಕೆ ಸೇರಿದಂತೆ ಆರೋಪಿತರುಗಳು ಮನೆ ನಿರ್ಮಿಸುತ್ತಿದ್ದರು . ನಮ್ಮ ಮನೆಯ ದಿಕ್ಕಿಗೆ ಆರೋಪಿತರುಗಳು ಸಜ್ಜಾ ನಿರ್ಮಿಸುತ್ತಿದ್ದರು . ಮಧ್ಯಾಹ್ನದ ವೇಳೆಯಲ್ಲಿ ಚಾಸಾ -1 ರವರು ಆರೋಪಿತರುಗಳನ್ನು ಆ ಬಗ್ಗೆ ಪ್ರಶ್ನಿಸಲಾಗಿ ಆರೋಪಿತರುಗಳು ಚಾಸಾ -1 ರವರ ವಿರುದ್ಧ ಗಲಾಟೆ ಮಾಡಿದರು . 1 ಮತ್ತು 2 ನೇ ಆರೋಪಿತರುಗಳು ದೊಣ್ಣೆಯೊಂದರಿಂದ ನನ್ನ ಮಗನ ತಲೆಯ ಮೇಲೆ ಹೊಡೆದರು . ನನ್ನ ಮಗ ಕಿರುಚಿಕೊಂಡಿದ್ದನ್ನು ಕೇಳಿ ನಾನು ಅಲ್ಲಿಗೆ ಹೋದೆ . 1 ಮತ್ತು 2 ನೇ ಆರೋಪಿತರುಗಳು ನನ್ನ ಕೂದಲು ಹಿಡಿದು ಎಳೆದಾಡಿದರು .ಆ ಸಮಯ 1 ನೇ ಆರೋಪಿತರು ಸ್ಥಳದಲ್ಲಿ ಬಿದ್ದಿದ್ದ ಕಲ್ಲೊಂದನ್ನು ತೆಗೆದುಕೊಂಡು ನನ್ನ ಮೇಲೆ ಹಲ್ಲೆ ಮಾಡಿದರು, ಅದು ತಪ್ಪಿ ನನ್ನ ಬಲಗಾಲಿನ ಮೇಲೆ ಬಿದ್ದು ಬೆರಳಿಗೆ ಗಾಯವಾಗಿದೆ . ಗಲಾಟೆ ಕೇಳಿ ಸುತ್ತಮುತ್ತಲು ಇದ್ದ ಚಾಸಾ -3 ಮತ್ತು 4 ರವರು ಸ್ಥಳಕ್ಕೆ ಬಂದು ಗಲಾಟೆ ಬಿಡಿಸಿದರು . . ನಂತರ ಅವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು . ನಾವು ಆಸ್ಪತ್ರೆಗೆ ಹೋಗುತ್ತಿದ್ದ ಸಮಯ 1 ಮತ್ತು 2 ನೇ ಆರೋಪಿತರುಗಳು ನಮಗೆ ಪ್ರಾಣ ಬೆದರಿಕೆ ಒಡ್ಡಿದ್ದಾರೆ . ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸಂಜೆ ವೇಳೆಗೆ ಠಾಣೆಗೆ ಹೋಗಿ ದೂರು ನೀಡಿದ್ದೇವೆ .

ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ . ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಒಂದು ದೊಣ್ಣೆ , ಮತ್ತು ಒಂದು ಕಲ್ಲು ತೋರಿಸಲಾಗಿ ಅವುಗಳನ್ನು ಗುರುತಿಸಿದ್ದಾರೆ . ಅವುಗಳನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ . ಸಾಕ್ಷಿಗೆ ಕೆಂಪು ಕಲೆಗಳಿಂದ ಕೂಡಿದ ಒಂದು ಬಿಳಿಯ ಬಣ್ಣದ ಬನಿಯನ್ ತೋರಿಸಲಾಗಿ ಅದು ಆ ದಿನ ಚಾಸಾ -1 ರವರು ಧರಿಸಿದ್ದ

ಬನಿಯನ್ ಎಂದು ಗುರುತಿಸಿದ್ದಾರೆ . ಸಾಕ್ಷಿಯು ಗುರುತಿಸಿದ ಸದರಿ ಬನಿಯನ್ ನ್ನು ಮು ಮಾ -3 ಎಂದು ಗುರುತಿಸಲಾಯಿತು . ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ . 1 ನೇ ಆರೋಪಿತರು ಮರಣ ಹೊಂದಿದ್ದು 2 ನೇ ಆರೋಪಿತರು ಖಾಯಂ ವಿನಾಯತಿ ಪಡೆದಿದ್ದಾರೆ . ಅವರ ಗುರುತು ಪತ್ತೆಯ ಬಗ್ಗೆ ತಕರಾರು ಇಲ್ಲವೆಂದು ಅವರ ಪರ ವಕೀಲರು ತಿಳಿಸಿದ್ದಾರೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ-</u>

ದಿಃ 21-05-2020 ರಂದು ಮೇಲೆ ಹೇಳಿದಂತಹ ಗಲಾಟೆ ನಡೆದಿದೆ ಎಂದರೆ ಸರಿ . 1 ಮತ್ತು 2 ನೇ ಆರೋಪಿತರುಗಳು ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದರೆ ಸರಿ . 1 ನೇ ಆರೋಪಿತರು ಮಾತ್ರ ಮು ಮಾ -1 ರಿಂದ ಚಾಸಾ -1 ರವರ ತಲೆಯ ಮೇಲೆ ಹಲ್ಲೆ ಮಾಡಿದ್ದಾರೆ ಎಂದರೆ ಸರಿ . 1 ಮತ್ತು 2 ನೇ ಆರೋಪಿತರುಗಳು ಚಾಸಾ -1 ರವರಿಗೆ ತಮ್ಮ ಕೈಗಳಿಂದ ಹೊಡೆದು ಕಾಲಿನಿಂದ ಒದ್ದಿದ್ದಾರೆ ಎಂದರೆ ಸರಿ . ದಿಃ 22-05-2020 ರಂದು ಪೊಲೀಸರ ಸಮಕ್ಷಮ ಮೇಲಿನ ವಿಚಾರಗಳ ಕುರಿತು ಹೇಳಿಕೆ ನೀಡಿದ್ದೇನೆ ಎಂದರೆ ಸರಿ . ಮೇಲೆ ಹೇಳಿದಂತೆ ಉಂಟಾಗಿದ್ದ ಕಾಲ ಬೆರಳಿನ ಗಾಯಕ್ಕೆ ಗುಬ್ಬಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-</u>

ಆರೋಪಿತರುಗಳು ಎರಡು ವರ್ಷಗಳ ಹಿಂದೆ ಪಾಯತೆಗೆದಿದ್ದರು . ಆ ನಂತರ ಆಗಾಗ ಭಾಗಶಃ ಮನೆ ನಿರ್ಮಾಣದ ಕೆಲಸ ಮಾಡುತ್ತಿದ್ದರು. ಆರೋಪಿತರುಗಳಿಗೆ ಒಂದೇ ಬಾರಿಗೆ ಸಂಪೂರ್ಣ ಮನೆ ನಿರ್ಮಿಸಲು ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ನಿಮ್ಮ ಮನೆಯಿಂದ ಆರೋಪಿತರುಗಳು ನಿರ್ಮಿಸುತ್ತಿದ್ದ ಸಜ್ಜಾ ಎಷ್ಟು ದೂರದಲ್ಲಿತ್ತು ಎಂದರೆ ಸಾಕ್ಷಿಯು ನಿಖರವಾಗಿ ಅಳತೆ ಹೇಳಲು ಗೊತ್ತಾಗುತ್ತಿಲ್ಲ , 15-20 ಅಡಿಗಳು ಇರಬಹುದು ಎಂದು ತಿಳಿಸಿದ್ದಾರೆ . ಮೇಲೆ ಹೇಳಿದಂತೆ ಗಲಾಟೆ ನಡೆದಾಗ ಮಧ್ಯಾಹ್ನದ ಸಮಯವಾಗಿತ್ತು. ಆರೋಪಿತರುಗಳು ಮತ್ತು ಚಾಸಾ -1 ರವರ ನಡುವೆ ಗಲಾಟೆ ನಡೆದಾಗ ನಾನು ಇರಲಿಲ್ಲ . ನನ್ನ ಮಗನ ಕೂಗಾಟ ಕೇಳಿ ಅಲ್ಲಿಗೆ ಹೋಗಿದ್ದೇನೆ . ಸಜ್ಜಾ ನಿರ್ಮಾಣದ ವಿಚಾರವಾಗಿ ಯಾವುದೇ ಗಲಾಟೆ ನಡೆದಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರುಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಚಾಸಾ -1 ರವರು ಅವರ ವಿರುದ್ಧ ಸುಳ್ಳು ವಿವರಗಳ ದೂರು ನೀಡಿದ್ದಾರೆ , ಅವರ ಪ್ರಕರಣಕ್ಕೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯ ಸಮಯ ಸ್ಥಳದಲ್ಲಿ ಎಷ್ಟು ಜನರು ಸೇರಿದ್ದರು ಎಂದು ನಿಖರವಾಗಿ ಹೇಳಲು

ಗೊತ್ತಾಗುತ್ತಿಲ್ಲ . ಆರೋಪಿತರುಗಳು ಮು ಮಾ -1 ರಿಂದ ನನ್ನ ಮಗನ ಮೇಲೆ ಹಲ್ಲೆ ಮಾಡಿದ್ದಾರೆ , ಮು ಮಾ -2 ರಿಂದ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ -1 ರಿಂದ 3 ನ್ನು ಪೊಲೀಸರಿಗೆ ನಾವೇ ನೀಡಿದ್ದೇವೆ . ಮು ಮಾ -3 ರಕ್ತದ ಕಲೆಗಳಿಂದ ಕೂಡಿದ ಬಟ್ಟೆಯಲ್ಲ , ಬಣ್ಣವನ್ನು ಹಚ್ಚಿ ರಕ್ತವೆಂದು ಸೃಷ್ಟಿಸಿ ಪೊಲೀಸರಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ಮು ಮಾ -1 ಕಲ್ಲು ಗಲಾಟೆ ಸ್ಥಳದಲ್ಲಿ ಬಿದ್ದಿತ್ತು , ನಾವೇ ಪೊಲೀಸರಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಗಲಾಟೆ ನಡೆಯದಿದ್ದರೂ ಮು ಮಾ -1 ಮತ್ತು 2 ರಿಂದ ಆರೋಪಿತರುಗಳು ಹಲ್ಲೆ ಮಾಡದಿದ್ದರೂ ಪೊಲೀಸರ ಸಮಕ್ಷಮ ಸುಳ್ಳು ವಿವರಗಳ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.